Evidence on preliminary issues.
ಸಾಕ್ಷಿಯನ್ನು ದಿನಾಂಕಃ 23-01-2023 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು.

**ಮುಖ್ಯವಿಚಾರಣೆ ಃ ಶ್ರಿ. ಎಸ್.ಬಿ.ಜೆ ಪ್ರತಿವಾದಿ ಪರ ವಕೀಲರಿಂದ :**

ಈ ದಿನ ನಾನು ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿವೆ. ಅದರಲ್ಲಿ ನನ್ನ ಸಹಿ ಇದೆ.

ನಾನು ಈ ದಿನ ನನ್ನ ತಕರಾರಿಗೆ ಸಂಬಂಧಿಸಿದಂತೆ ಉಪನೋಂದಣಾ ಅಧಿಕಾರಿ ಮುಧೋಳ ರವರು ದಿ: 27-12-2022 ರಂದು ನೀಡಿದ ಇಂಗಳಗಿ ಗ್ರಾಮ ಪಂಚಾಯತ ವ್ಯಾಪ್ತಿಯ ದಾವಾ ಆಸ್ತಿಯು ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ದರದ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಉಪನೋಂದಣಾ ಅಧಿಕಾರಿ ಮುಧೋಳ ರವರು ದಿ: 27-12-2022 ರಂದು ನೀಡಿದ ಆಲಗುಂಡಿ ಬಿಕೆ ಗ್ರಾಮ ಪಂಚಾಯತ ವ್ಯಾಪ್ತಿಯ ದಾವಾ ಆಸ್ತಿಯು ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ದರದ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಉಪನೋಂದಣಾ ಅಧಿಕಾರಿ ಮುಧೋಳ ರವರು ದಿ: 27-12-2022 ರಂದು ನೀಡಿದ ಆಲಗುಂಡಿ ಬಿಕೆ ಗ್ರಾಮ ಪಂಚಾಯತ ವ್ಯಾಪ್ತಿಯ ದಾವಾ ಆಸ್ತಿಯು ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ದರದ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ಉಪನೋಂದಣಾ ಅಧಿಕಾರಿ ಮುಧೋಳ ರವರು ದಿ: 27-12-2022 ರಂದು ನೀಡಿದ ಇಂಗಳಗಿ ಗ್ರಾಮ ಪಂಚಾಯತ ವ್ಯಾಪ್ತಿಯ ದಾವಾ ಆಸ್ತಿಯು ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿ ದರದ ಪ್ರತಿ ಹಾಜರುಪಡಿಸಿದ್ದು ಅದನ್ನು ನಿಡಿ-4 ಎಂದು ಗುರುತಿಸಲಾಯಿತು.

ವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಹಿ

**ಸಾಕ್ಷಿಯನ್ನು ಮಧ್ಯಾಹ್ನ ಪುನಃ 3-10 pm ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ. ಎಸ್.ಸಿ.ಯು ವಾದಿ ಪರ ವಕೀಲರಿಂದ.**

ನಾನು ಹಾಜರುಪಡಿಸಿದ ನಿಡಿ-೧ ರಿಂದ ೪ ರಲ್ಲಿ ಇಂಗಳಗಿ ಗ್ರಾಮದ ವಸತಿ ಉದ್ದೇಶದ ಖಾಲಿ ನಿವೇಶನದ ಪ್ರತಿ ಚೌ ಮೀಟರ 700 ಎಂದು ಅದರಲ್ಲಿ ವಾಣಿಜ್ಯೋಪಯೋಗಿ ಖಾಲಿ ನಿವೇಶನದ ಪ್ರತಿ ಚೌ.ಮೀ ಗಳಲ್ಲಿ 980 ಮತ್ತು ಬಿನ್ ಶೇತ್ಕಿ 2100 ಎಂದು ನಮೂದಿಸಿದ್ದು ಇದೆ ಎಂದರೆ ಸರಿ. ಅದೇ ರೀತಿ ಗ್ರಾಮ ಪಂಚಾಯತ ಇಂಗಳಗಿ ಮತ್ತು ಆಲಗುಂಡಿ ಬಿಕೆ ಅವರು ನೀಡಿದ ಪಂಚಾಯತ ಉತಾರೆಗಳಲ್ಲಿ ವಿಸ್ತೀರ್ಣ ನಮೂದಿಸಿಲ್ಲ ಎಂದರೆ ಸರಿ. ದಾವಾ ಪಂಚಾಯತ ಆಸ್ತಿಯ ವಿಸ್ತೀರ್ಣ ಮತ್ತು ಅವುಗಳ ಮೌಲ್ಯಗಳ ಬಗ್ಗೆ ಕಾಲ್ಕುಲೇಶನ ಮೆಮೋ ಹಾಕಿಲ್ಲ ಎಂದರೆ ಸರಿ. ದಾವಾ ಪಂಚಾಯತ ಆಸ್ತಿಗಳ ವಿಸ್ತೀರ್ಣ ಮತ್ತು ಅವುಗಳ ಮೌಲ್ಯ ನೀಡುವಂತೆ ನಾನು ಪಂಚಾಯತಗೆ ಕೇಳಿಕೊಂಡು ಯಾವುದೇ ಅರ್ಜಿ ಹಾಕಿಲ್ಲ ಮತ್ತು ಈ ಕುರಿತು ನ್ಯಾಯಾಲಯಕ್ಕೆ ಯಾವುದೇ ದಾಖಲು ಹಾಜರುಪಡಿಸಿಲ್ಲ ಎಂದರೆ ಸರಿ. ಮುಂದುವರೆದು ಸಾಕ್ಷಿಯು ದಾವಾ ಪಂಚಾಯತ ಆಸ್ತಿಗಳ ಉತಾರೆಯನ್ನು ಪಂಚಾಯತಗಳಿಂದ ಪಡೆದುಕೊಂಡು ಅವುಗಳನ್ನು ಉಪನೋಂದಣಾ ಅಧಿಕಾರಿಯಲ್ಲಿ ಸಲ್ಲಿಸಿದ ನಂತರ ಅವರು ನಿಡಿ-೧ ರಿಂದ ೪ ರಂತೆ ದಾಖಲೆಗಳನ್ನು ನೀಡಿದ್ದಾಗಿ ನುಡಿಯುತ್ತಾರೆ. ನಾನು ವಾದಿಯು ಈಗಾಗಲೇ ಗುರುತಿಸಿಕೊಂಡಿರುವ ನಿಪಿ-೫ ರಿಂದ ೭ನ್ನು ನೋಡಿದರೇ ಗುರುತಿಸುತ್ತೇನೆ. ನಿಪಿ-೫ ರಿಂದ ೭ ರಲ್ಲಿ ದಾವಾ ಪಂಚಾಯತ ಆಸ್ತಿಯ ವಿಸ್ತೀರ್ಣ ನಮೂದಿಸಿಲ್ಲ ಎಂದರೆ ಸರಿ. ಈ ಕಾರಣಕ್ಕೆ ದಾವಾ ಪಂಚಾಯತ ಆಸ್ತಿಯ ಮೌಲ್ಯ ನಿರ್ಧರಿಸಲು ಆಗುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ಯಾವ ದಾಖಲೆಗಳ ಆಧಾರದ ಮೇಲೆ ಈ ದಾವೆ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದಿಲ್ಲ ಎಂದು ಹೇಳುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿ ವಾದಿಯರು ದಾವಾ ಪಂಚಾಯತ ಆಸ್ತಿಯ ಮೌಲ್ಯ ಕಡಿಮೆ ತೋರಿಸಿ ದಾವೆ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯು ಪಂಚಾಯತ ವ್ಯಾಪ್ತಿಯಲ್ಲಿ ಬರುವುದರಿಂದ ಈ ನ್ಯಾಯಾಲಯಕ್ಕೆ ದಾವೆ ಮುಂದುವರೆಸಿಕೊಂಡು ಹೋಗುವ ಅಧಿಕಾರ ವ್ಯಾಪ್ತಿ ಇದೆ ಎಂದರೆ ಸರಿಯಲ್ಲ.

ಜಮೀನು ರಿ.ಸ.ನಂ. 97/4 ರ ಉತಾರೆಯಲ್ಲಿ ವಾದಿ ಮತ್ತು ಪ್ರತಿವಾದಿಯರ ಸಾಮೂಹಿಕ ಹೆಸರು ದಾಖಲೆ ಇದೆ ಎಂದರೆ ಸರಿ. ಈ ಜಮೀನಿನಲ್ಲಿ ವಾದಿಗೆ 1/3 ಇದೆ ಎಂದರೆ ಸರಿ. ಈ ಕಾರಣಕ್ಕೆ ವಾದಿಯು ತನ್ನ ಹಿಸ್ಸೆಯ 1/3 ಆಸ್ತಿಗೆ ಮಾತ್ರ ದಾವೆಯನ್ನು ಮೌಲ್ಯ ಮಾಡಿದ್ದಾರೆ ಎಂದರೆ ಸರಿಯಲ್ಲ. ನಾನು ಗುರುತಿಸಿಕೊಂಡಿರುವ ನಿಡಿ-೪ ರಂತೆ ವಾದಿಯ 1/3 ಮೌಲ್ಯ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ರಿ.ಸ.ನಂ. 94/1 ಜಮೀನು ವಾದಿಯ 1/3 ಹಿಸ್ಸೆ ಮೌಲ್ಯ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಈ ಎರಡು ಜಮೀನುಗಳಲ್ಲಿ ವಾದಿಯ 1/3 ಹಿಸ್ಸೆ ಮೌಲ್ಯ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ ಎಂದು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಅದೇ ರೀತಿ ಈ ಜಮೀನುಗಳಿಗೆ ಸಂಬಂಧಿಸಿದಂತೆ

ನಾನು ನ್ಯಾಯಾಲಯಕ್ಕೆ ಯಾವುದೇ ಕ್ಯಾಲ್ಕುಲೇಶನ ಮೆಮೋ ಹಾಕಿಲ್ಲ ಎಂದರೆ ಸರಿ. ನಾನು ವಾದಿಗೆ ತೊಂದರೆ ಕೊಡಲು ಮತ್ತು ವಿನಾಕಾರಣ ದಾವೆಯನ್ನು ಮುಂದೂಡಲು ಈ ನ್ಯಾಯಾಲಯಕ್ಕೆ ದಾವೆಯನ್ನು ನಡೆಸಿಕೊಂಡು ಹೋಗುವ ಅಧಿಕಾರ ವ್ಯಾಪ್ತಿ ಇದ್ದರೂ ಸಹಿತ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-

ಹೆಚ್ಚುವರಿ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಹಿ